**ಗೋಪೀನಾಥ ರಾವ್**

ಕಲೆ: ಡಿ.ಕೆ. ರಮೇಶ್

# ಹಾರಲಾಗದ ಹಕ್ಕಿ

ರಮಾ ಗಡಿಬಿಡಿಯಲ್ಲಿ ದೋಸೆ ಹುಯ್ದು ಡೈನಿಂಗ್ ಟೇಬಲ್ ಮೇಲಿಟ್ಟು ಮರುಕ್ಷಣದಲ್ಲಿ ಮಾಯವಾಗಿದ್ದಳು. ಶೇವಿಂಗು ಮತ್ತು ಸ್ನಾನ ಒಟ್ಟಿಗೆ ಮುಗಿಸಿ ನಾನು ಹೊರಬರುವಾಗ ಗಂಟೆ ಒಂಬತ್ತೂಕಾಲು. ಡೈನಿಂಗ್ ಟೇಬಲ್ ಮೇಲೆ ಇದ್ದ ದೋಸೆಯನ್ನು ಮಡಚಿ ಒಂದೇ ಏಟಿಗೆ ಬಾಯಿಗೆ ತುರುಕಿ ನುಂಗುತ್ತಲೇ ಕೈಗೆ ಸಿಕ್ಕಿದ ಬಟ್ಟೆ ಧರಿಸಿ ಐದು ನಿಮಿಷದಲ್ಲಿ ನಾನೂ ಮನೆಯಿಂದ ಹೊರಬಿದ್ದಿದ್ದೆ. ಮಾಮೂಲಿ ಟ್ರಾಫಿಕ್ ಆದರೆ ಹತ್ತಕ್ಕೆ ಆಫೀಸು ತಲುಪುವುದು ಸಾಧ್ಯವಾಗುತ್ತೆ ಅನ್ನುವುದು ಈ ಮೂರು ವರ್ಷಗಳ ನನ್ನ ಅನುಭವ.

ಒಮ್ಮೊಮ್ಮೆಗೆ ಎರಡೆರಡು ಮೆಟ್ಟಲಿಳಿದು ಬಂದು ಕಾರು ಹತ್ತಿ ಸ್ಟಾರ್ಟ್ ಮಾಡುತ್ತಿದ್ದಂತೆ ಬಾನೆಟ್ ಮೇಲೆ ವೈಪರಿನಲ್ಲಿ ಬಂದು ಕೂತಿದ್ದ ಹಕ್ಕಿ ನನ್ನ ಗಮನ ಸೆಳೆಯಿತು. ಸಮಯವಿದ್ದರೆ ಕಾರಿಳಿದು ಅದನ್ನು ಓಡಿಸಿ ಮತ್ತೆ ಕಾರು ಹತ್ತಿ ಚಲಾಯಿಸುತ್ತಿದ್ದೆನೋ ಏನೋ. ಹಕ್ಕಿ ತಾನಾಗಿಯೇ ಹಾರಿಹೋಗುತ್ತೆ ಎಂದುಕೊಂಡು ರಸ್ತೆ ಬದಿಯ ಪಾರ್ಕಿಂಗಿನಿಂದ ಕಾರನ್ನು ಮೆಲ್ಲನೆ ರಸ್ತೆಗಿಳಿಸಿದೆ. ಮೇನ್ ರೋಡಿನಲ್ಲಿ ಆಗಲೇ ಟ್ರಾಫಿಕ್ ಶುರುವಾಗಿ ಕಾರು ಮೆಲ್ಲಮೆಲ್ಲನೆ ಮುಂದುವರಿಯುತ್ತಿತ್ತು. ಹಕ್ಕಿ ಕುಳಿತಲ್ಲಿಯೇ ಆಚೀಚೆ ತಿರುಗುತ್ತಿತ್ತೇ ವಿನಃ ಮೇಲಕ್ಕೆ ಹಾರಿ ಹೋಗಲಿಲ್ಲ. ನೇರ ಕಣ್ಣಿನ ಎದುರು ಗಾಜಿನ ಆಚೆ ಬದಿಯಲ್ಲಿ ಹಕ್ಕಿ, ಈಚೆ ಬದಿಯಲ್ಲಿ ನಾನು. ಕಾರು ಅದರ ಪಾಡಿಗೆ ರಸ್ತೆಯ ಜಾಗಕ್ಕೆ ಮತ್ತು ವೇಗಕ್ಕೆ ಹೊಂದಿಕೊಂಡು ಕ್ರಮಿಸುತ್ತಿತ್ತು. ಇದೇ ರಸ್ತೆಯಲ್ಲಿ ಕಾರಿಗೂ ಮೂರು ವರ್ಷದ ಅನುಭವ ತಾನೇ!... ನಾನಾದರೋ ಎದುರಿನ ರಸ್ತೆಗಿಂತ ಜಾಸ್ತಿ ಹಕ್ಕಿಯ ಚಲನವಲನಗಳನ್ನು ಗಮನಿಸುತ್ತಿದ್ದೆ. ಆಗೊಮ್ಮೆ ಈಗೊಮ್ಮೆ ರೆಕ್ಕೆಗಳ ಎಡೆಗಳಲ್ಲಿ ಕುಕ್ಕುತ್ತ, ಕೊಕ್ಕು ಮೇಲೆ ಕೆಳಗೆ ಚಲಾಯಿಸುತ್ತ ಆ ಹಕ್ಕಿ ಆರು ಅಡಿಯ ನನ್ನ ಇಡೀ ದೇಹದ ಅಳತೆ ಮಾಡುವಂತೆ ನಡುನಡುವೆ ಒಮ್ಮೆ ಎದುರು ಬಗ್ಗಿ ಇಣುಕುತ್ತಿತ್ತು. ಅದನ್ನೇ ನೋಡುತ್ತಿದ್ದ ನನಗೆ ಹಲವಾರು ಸಂದೇಹಗಳು ಒಮ್ಮೆಲೆ ಹುಟ್ಟಿ ಬಂದವು. ಅದು ಹಾರಲಾಗದ ಮರಿಹಕ್ಕಿಯೇ? ಗಾಯಗೊಂಡು ಹಾರುತ್ತಿಲ್ಲವೇ? ಮುದಿಹಕ್ಕಿಯೇ? ಅಯ್ಯೋ ಪಾಪ ಎಂದಿತು ಮನಸ್ಸು. ಸ್ವಲ್ಪ ಹೊತ್ತಿನಲ್ಲಿ ತಾನು ಮರಿಯೂ ಅಲ್ಲ ಮುದಿಯೂ ಅಲ್ಲ ಆರೋಗ್ಯವಾಗಿದ್ದೀನಿ ಎಂದು